
# ಏಕಾಗ್ರತೆ

ನಿರೂಪಣೆ : ಕೆ.ಜಿ. ವಿರೂಪಾಕ್ಷಪ್ಪ



ಕುರುವಂಶದ ರಾಜಪುತ್ರರಿಗೆ ದ್ರೋಣಾಚಾರ್ಯರು ಧನುರ್ವಿದ್ಯಾ ಗುರುವಾಗಿದ್ದರು. ಒಮ್ಮೆ ತಮ್ಮ ಶಿಷ್ಯರ ಸಾಮರ್ಥ್ಯವನ್ನು ಪರೀಕ್ಷಿಸಲು ಒಂದು ಪರೀಕ್ಷೆಯನ್ನಿಟ್ಟರು. ಒಂದು ಮರದ ತುದಿಯಲ್ಲಿ ಕೃತಕವಾದ ಪಕ್ಷಿಯೊಂದನ್ನು ಇರಿಸಿದರು. ಅದಕ್ಕೆ ವಜ್ರದಂತೆ ಹೊಳೆಯುವ ಕಣ್ಣೊಂದನ್ನು ಜೋಡಿಸಿದ್ದರು. ರಾಜಕುಮಾರರಿಗೆ ಆ ಪಕ್ಷಿಯನ್ನು ತೋರಿಸುತ್ತ, "ಆ ಪಕ್ಷಿಯ ಹೊಳೆಯುವ ಕಣ್ಣು ನಿಮ್ಮ ಗುರಿ. ಬಾಣದಿಂದ ಆ ಕಣ್ಣಿಗೆ ಗುರಿಯಿಟ್ಟು, ಭೇದಿಸಬೇಕು" ಎಂಬ ಸವಾಲನ್ನು ಮುಂದಿಟ್ಟರು. ಎಲ್ಲ ರಾಜಕುಮಾರರೂ ಸಿದ್ಧರಾಗಿ ತಮ್ಮ ಸರದಿಗಾಗಿ ಕಾದರು.

ಮೊದಲು ಯುಧಿಷ್ಠಿರನ ಸರದಿ. ದ್ರೋಣರು ಅವನನ್ನು ಕುರಿತು, "ಯುಧಿಷ್ಠಿರ, ನಿನಗೆ ಆ ಮರ, ಪಕ್ಷಿ ಕಾಣುತ್ತಿದೆಯೇ?" ಎಂದು ಕೇಳಿದರು. "ಹೌದು, ಕಾಣುತ್ತಿದೆ" ಎಂದನು ಯುಧಿಷ್ಠಿರ. ದ್ರೋಣರು: "ನಿನಗೆ ನಾನೂ, ನಿನ್ನ ತಮ್ಮಂದಿರು, ಇಲ್ಲಿರುವ ಜನ ಎಲ್ಲರೂ ಕಾಣತ್ತಿದ್ದಾರೆಯೇ?" ಯುಧಿಷ್ಠಿರ, "ಹೌದು, ಆಚಾರ್ಯರೇ ಎಲ್ಲರೂ ಕಾಣುತ್ತಿದ್ದಾರೆ" ಎಂದನು. ದ್ರೋಣರು, "ಹಾಗಾದರೆ, ನೀನು ಈ ಗುರಿಯನ್ನು ಭೇದಿಸಲಾರೆ, ಹೋಗು" ಎಂದು ಹೇಳಿ ಅವನನ್ನು ಹಿಂದಕ್ಕೆ ಕಳುಹಿಸಿದರು.

ಅನಂತರ ದ್ರೋಣರು ಧೃತರಾಷ್ಟ್ರನ ಪುತ್ರರನ್ನು ಒಬ್ಬೊಬ್ಬರನ್ನಾಗಿ ಕರೆದು, ಇದೇ ಪ್ರಶ್ನೆಗಳನ್ನು ಕೇಳಿದರು. ಅವರೆಲ್ಲರೂ ಅದೇ ರೀತಿ ಉತ್ತರಿಸಿದರು. ಅರ್ಜುನನ ಹೊರತು ಮಿಕ್ಕ ಎಲ್ಲ ಪಾಂಡುಪುತ್ರರೂ ಸಹ ಯುಧಿಷ್ಠಿರನಂತೆಯೇ ಉತ್ತರಿಸಿದರು. ಅರ್ಜುನನ ಸರದಿ ಬಂದಾಗ ದ್ರೋಣರು: "ಅರ್ಜುನಾ, ನಿನ್ನ ಗುರಿ ನಿನಗೆ ಗೊತ್ತಿದೆ ತಾನೆ?" ಅರ್ಜುನ: "ಹೌದು, ಆಚಾರ್ಯರೇ ಹಕ್ಕಿಯ ಕಣ್ಣನ್ನು ಭೇದಿಸುವುದೇ ನನ್ನ ಗುರಿ." ದ್ರೋಣರು: "ನಿನಗೆ ನಾನೂ, ನಿನ್ನ ಸಹೋದರರು, ಇಲ್ಲಿರುವ ಜನ ಎಲ್ಲರೂ ಕಾಣುತ್ತಿದ್ದಾರೆಯೇ?" ಹಕ್ಕಿಯ ಕಣ್ಣಿನೆಡೆಗೇ ದೃಷ್ಟಿ ನೆಟ್ಟಿದ್ದ ಅರ್ಜುನ ಉತ್ತರಿಸಿದ: "ಇಲ್ಲ, ಗುರುಗಳೇ, ನೀವಾರೂ ಕಾಣುತ್ತಿಲ್ಲ, ಹಕ್ಕಿಯೂ ಕಾಣುತ್ತಿಲ್ಲ, ಹಕ್ಕಿಯ ಕಣ್ಣು ಮಾತ್ರ ಕಾಣುತ್ತಿದೆ." ಆಗ ದ್ರೋಣರು ತಮ್ಮ ಪ್ರಿಯ ಶಿಷ್ಯನನ್ನು ಮೆಚ್ಚುತ್ತಾ, "ಭೇಷ್, ಅರ್ಜುನ, ನೀನೀಗ ಗುರಿಯನ್ನು ಭೇದಿಸಬಲ್ಲೆ. ಎಲ್ಲಿ, ಬಾಣ ಪ್ರಯೋಗ ಮಾಡು" ಎಂದು ಹೇಳಿ ಹುರಿದುಂಬಿಸಿದರು. ಅರ್ಜುನನು ಹಕ್ಕಿಯ ಕಣ್ಣಿಗೆ ಗುರಿಯಿಟ್ಟು ಬಾಣವನ್ನು ಬಿಟ್ಟನು. ಬಾಣವು ಹಕ್ಕಿಯ ಕಣ್ಣನ್ನು ಭೇದಿಸಿತು. ಗುರುಗಳು ತಮ್ಮ ಶಿಷ್ಯನನ್ನು ಅಭಿನಂದಿಸಿದರು. ತಮ್ಮ ಮನಸ್ಸಿನಲ್ಲಿ, ಇವನು ಮುಂದೆ ಶ್ರೇಷ್ಠ ಬಿಲ್ಲುಗಾರನಾಗುವುದರಲ್ಲಿ ಸಂಶಯವಿಲ್ಲ ಎಂದು ಅಭಿಮಾನಪಟ್ಟರು.

**ಜೀವನದಲ್ಲಿ ಯಾವುದೇ ಕಾರ್ಯದಲ್ಲಿ ಯಶಸ್ಸು ಸಾಧಿಸಲು ಏಕಾಗ್ರತೆಯೇ ಮುಖ್ಯ ಸಾಧನ.**